High School for Belakavadi or Shivasamudram.

Q.—226. **Sri M. CHIKKALINGIAH** (Malavalli—Scheduled Castes).—

Will the Government be pleased to state:—

(*a*) whether constant representations have been made to Government to start one Government High School at Belakavadi or at Shivasamudram, Malavalli Taluk;

(*b*) whether one gentleman at Belakavadi has promised to contribute up to Rs. 10,000 towards the construction of the High School building at Belakavadi;

(*c*) what is the action taken by Government so far in the matter?

A.—**Sri A. G. RAMACHANDRA RAO** (Minister for Law and Education).—

(*a*) A representation has been made.

(*b*) Government have no information.

(*c*) The matter is under consideration.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೆಳಕವಾಡಿ ಗ್ರಾಮದಲ್ಲಿ ಒಂದು ಸರ್ಕಾರಿ ಹೈಸ್ಕೂಲನ್ನು ಸ್ಥಾಪಿಸುವ ವಿಚಾರದಲ್ಲಿ ಸರ್ಕಾರಕ್ಕೆ ಇಲಾಖೆಯವರಿಂದ ಏನಾದರೂ ಸಲಹೆಗಳು ಬಂದಿವೆಯೇ?

***Sri A. G. RAMACHANDRA RAO.**—Government have no information on that. ನಮಗೆ ಯಾವ ಪ್ರಪೋಸಲ್‌ಗಳೂ ಬಂದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಯಾರೋ ಒಬ್ಬರು ಖಾಸಗಿ ಮಹನೀಯರು ಸರ್ಕಾರದವರು ಅಲ್ಲಿ ಒಂದು ಹೈಸ್ಕೂಲನ್ನು ಸ್ಥಾಪಿಸುವುದಾದರೆ ತಾವು ಆ ಕಟ್ಟಡ ಕ್ಕಾಗಿ ಬೇಕಾಗುತಕ್ಕ ಹಣವನ್ನು ಮುಂಗಡವಾಗಿ ಸರ್ಕಾರದಲ್ಲಿ ಡಿಪಾಜಿಟ್ಮಾಗಿಡುತ್ತೇವೆಂದು ಹೇಳಿರತಕ್ಕ ವಿಚಾರದಲ್ಲಿ ಇಲಾಖೆಯವರಿಂದ ಸರ್ಕಾರಕ್ಕೆ ಯಾವ ವರದಿಯೂ ಬಂದಿಲ್ಲಪೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರದಲ್ಲಿ ನಮಗೆ ಇತ್ತೀಚೆಗೆ ಒಂದು ರೆಪ್ರೆಸೆಂಟೇಷ್ಷ ಮಾತ್ರ ಬಂದಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಏನೆಂದು?

ಶ್ರೀ ಎ. ಜಿ. ರಾಮಚಂದ್ರರಾವ್.—ಹೈಸ್ಕೂಲನ್ನು ಕೊಡಿ ಎಂದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರೇ ಅಲ್ಲೊಂದು ಹೈಸ್ಕೂಲನ್ನು ಸ್ಥಾಪಿಸುವ ಬಗ್ಗೆ ಇಲಾಖೆಯವರಿಂದ ತಮಗೇನೂ ರಿಪೋರ್ಟುಗಳು ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನೋಟೀಸ್.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬೆಳಕವಾಡಿ ಗ್ರಾಮದಲ್ಲಿರುವ ಶ್ರೀ ಭೋಗಪ್ಪನೆಂಬವರು ಈ ಹೈಸ್ಕೂಲನ್ನು ಸ್ಥಾಪನೆ ಮಾಡತಕ್ಕ ಬಗ್ಗೆ 10,000 ರೂಪಾಯಿಗಳನ್ನು ಕೊಡುವುದಾಗಿ ಪಾಗ್ಯಾನಮಾಡಿರತಕ್ಕ ವಿಚಾರ ಸರ್ಕಾರದವರ ಅವಗಾಹನೆಗೆ ಬಂದಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾವ್.—ನಾನು ಮೊನ್ನೆ ಆ ಪ್ರಾಂತ್ಯ ಪ್ರವಾಸ ಹೋಗಿದ್ದಾಗ್ಗೆ ದಾರಿಯಲ್ಲಿ ಅವರು ಸಿಕ್ಕಿ ನನಗೆ ಈ ವಿಚಾರವನ್ನು ತಿಳಿಸಿದರು. ಆಗ ನನಗೆ ಈ ಸಂಗತಿ ಗೊತ್ತಾಯಿತು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಸರ್ಕಾರದವರು ಹೈಸ್ಕೂಲನ್ನು ಸ್ಥಾಪಿಸುವುದಾದರೆ ಹತ್ತು ಸಾವಿರ ರೂಪಾಯಿಗಳನ್ನು ದಾನವಾಗಿ ಕೊಡುತ್ತೇನೆಂದು ಆ ದಾನಿಗಳೊಬ್ಬರು ಮುಂದೆ ಬಂದಿರುವುದರಿಂದ ತಾವು ಈ ಬಗ್ಗೆ ಏನು ಕಾರ್ಯ ಕ್ರಮಗಳನ್ನು ಕೈಗೊಂಡಿದ್ದೀರಿ?

ಶ್ರೀ ಎ. ಜಿ. ರಾಮಚಂದ್ರರಾವ್.—ಆ ವಿಚಾರವನ್ನೆಲ್ಲಾ ಪರಿಶೀಲನೆ ಮಾಡುತ್ತೇವೆ ಎಂದು ಮಾತ್ರ ಈಗ ತಿಳಿಸಬಲ್ಲೆ.

Municipal High School in Hiriyur Town.

Q.—242. **Sri V. MASIYAPPA** (Hiriyur).—

Will the Government be pleased to state:—

(*a*) whether there is a Municipal High School in Hiriyur Town;

(*b*) whether it has come to their notice that accommodation is not sufficient for the increasing strength;

(*c*) whether any representation has been made for the taking up of the construction of the building;

(*d*) whether the municipality has given its quota of Rs. 30,000;

(*e*) if so, when;

(*f*) why there has been such a long delay in constructing the building;

(*g*) when the foundation was laid and by whom?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) Yes.

(*c*) Yes.

(*d*) Yes.

(*e*) On 8th December 1949.

(*f*) The Municipal Council, Hiriyur, has not taken up the work.

(*g*) (1) Not so far.

(2) Does not arise.

ಶ್ರೀ ವಿ. ಮಸಿಯಪ್ಪ.—ತಾವು ಇಲ್ಲಿ (ಜಿ) ಪ್ರಶ್ನೆಗೆ ಉತ್ತರವಾಗಿ "ಆ ಅಸ್ತಿಭಾರವನ್ನು ಇನ್ನೂ ಹಾಕಿಲ್ಲ" ಎಂದು ಉತ್ತರ ಕೊಟ್ಟಿದ್ದೀರಿ. ಸುಮಾರು 1950ರಲ್ಲೇ ಮೈಸೂರು ಸಂಸ್ಥಾನದ ಶ್ರೀಮಾ ಮಹಾರಾಜರ

ವರು ಆ ಪ್ರಾಂತಕ್ಕೆ ಪ್ರವಾನ ಬಂದಿದ್ದಂಥ ಕಾಲದಲ್ಲಿ —ಚಿತ್ರದುರ್ಗದಲ್ಲಿ ಒಂದು ಸಿವಿಲ್ ಆಸ್ಪತ್ರೆ ಮತ್ತು ಇಂಟರ್‌ಮೀಡಿಯೆಟ್ ಕಾಲೇಜುಗಳ ಅಸ್ತಿಭಾರವನ್ನು ಮತ್ತು ಹಿರಿಯೂರಿನಲ್ಲಿ ಈ ಹೈನ್ಯೂಲಿನ ಅಸ್ತಿಭಾರ ವನ್ನೂ ಶ್ರೀಮನ್ಮಹಾರಾಜರವರೇ ಖುದ್ದಾಗಿ ಹಾಕಿರುತ್ತಾರೆಂಬ ವಿಚಾರ ಸರ್ಕಾರದವರ ಗಮನಕ್ಕೆ ಬಂದಿಲ್ಲವೇ ?

*ಶ್ರೀ ಎ. ಜಿ. ರಾಮಚಂದ್ರರಾವ್.—ಹಾಗೆ ಅವರು ಅಸ್ತಿಭಾರ ಹಾಕಿದಂಥ ವಿಚಾರವಾಗಿ ಯಾವ ದಾಖಲೆ ಗಳೂ ಇದ್ದಹಾಗೆ ಕಂಡುಬರುತ್ತಿಲ್ಲ.

ಶ್ರೀ ವಿ. ಮಸಿಯಪ್ಪ.—ಅವರೇ ಖುದ್ದಾಗಿ ಹಾಕಿದ ವಿಚಾರ ! How did it happen ?

Sri A. G. RAMACHANDRA RAO.—I will enquire into it.

ಶ್ರೀ ವಿ. ಮಸಿಯಪ್ಪ.—ತಾವು (f)ಗೆ ಉತ್ತರವಾಗಿ "ಅಲ್ಲರತಕ್ಕ ಮುನಿಸಿಪಾಲಿಟಿಯವರು ಈ ಕೆಲಸವನ್ನು ಕೈಗೊಂಡಿಲ್ಲ" ಎಂದು ತಿಳಿಸೋಣವಾಗಿದೆ. ಅವರು ಯಾವ ರೀತಿ ಈ ಕೆಲಸವನ್ನು ಕೈಗೊಳ್ಳಬೇಕಾಗಿತ್ತು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅವರು ಮೊಟ್ಟ ಮೊದಲನೆಯದಾಗಿ ಈ ಕಟ್ಟಡದ ಕೆಲಸವನ್ನು ಪ್ರಾರಂಭಿಸಬೇಕಾಗಿತ್ತು. ಅದನ್ನು ಅವರು ಮಾಡಿಲ್ಲ.

ಶ್ರೀ ವಿ. ಮಸಿಯಪ್ಪ.—ಈ ಕಟ್ಟಡದ ಕೆಲಸವನ್ನು ಅವರು ಪ್ರಾರಂಭಿಸಬೇಕಾಗಿತ್ತೋ ಅಥವಾ P.W.D. ಅವರು ಮಾಡಬೇಕಾಗಿತ್ತೋ ?

ಶ್ರೀ ಎ. ಜಿ. ರಾಮಚಂದ್ರರಾವ್.—P.W.D. ಕೆಲಸ ಮಾಡಬೇಕು, ಮುನಿಸಿಪಾಲಿಟಿಯವರು ಹಣ ಒದಗಿಸಬೇಕು.

ಶ್ರೀ ವಿ. ಮಸಿಯಪ್ಪ.—ನಾವು ಆ ಕೆಲಸವನ್ನು ಕೈಗೊಳ್ಳಬೇಕೇ ? ಮುನಿಸಿಪಾಲಿಟಿಯವರು ಕೊಡ ತಕ್ಕ ದುಡ್ಡನ್ನು ಸರ್ಕಾರದವರು ತೆಗೆದುಕೊಂಡು ಸರ್ಕಾರದವರು ಕೊಡತಕ್ಕಂಥ ಗ್ರಾಂಟ್ ಮೊಬಲಗನ್ನೂ ಅದಕ್ಕೆ ಸೇರಿಸಿ, ಆ ಒಟ್ಟು ಮೊಬಲಗನ್ನು ವಿದ್ಯಾಭ್ಯಾಸದ ಇಲಾಖೆಯವರಿಗೆ ಕೊಟ್ಟು—ಅನಂತರ ಆ ವಿದ್ಯಾಭ್ಯಾಸದ ಇಲಾಖೆಯವರು ಈ ಕಟ್ಟಡದ ಕೆಲ ಸವನ್ನು ಈ ಇಂಜನಿಯರಿಂಗ್ ಇಲಾಖೆಗೆ ವಹಿಸುವಂತೆ —ಇಷ್ಟೆಲ್ಲವನ್ನೂ ಮಾಡತಕ್ಕದ್ದು ಸರ್ಕಾರದವರ ಕೆಲಸವಲ್ಲವೇ ? ಚಿತ್ರದುರ್ಗದಲ್ಲಿ ಈ ಕೆಲಸದ ಜೊತೆ ಯಲ್ಲೇ ಪ್ರಾರಂಭವಾದ ಕೆಲಸಗಳೆಲ್ಲಾ ಈಗಾಗಲೇ ಮುಗಿಯುತ್ತ ಬಂದಿವೆ.

Sri A. G. RAMACHANDRA RAO.—In compliance with this direction, the Executive Engineer refunded to the municipality the unspent amount of Rs. 28,619-1-0 on 11th March 1953, furnishing also an outlay statement for Rs. 1,380-15-0. The District Educational Officer further reports that thereupon, the Municipal President was requested several times to expedite the construction work in accordance with the approved plan and estimate and to submit necessary grant-in-aid bills together with work bills and measurement book duly certified to by the Executive Engineer for arranging payment of amount sanctioned by Government. But there has been no progress in the construction work so far.

Mr. SPEAKER.—The Hon'ble Member wants to know, after the municipality has deposited Rs. 30,000, who is the authority to construct and who has to take up this work.

Sri A. G. RAMACHANDRA RAO.—The authority would be the P.W.D., but the municipality must state that they have authorised it and that they are going to stand behind it. Otherwise who is going to take the initiative ?

Sri V. MASIYAPPA.—Are the Government aware that the P. W. D. authorities of the Chitaldrug District are telling the municipality that they cannot take up the work until the full amount, the estimated value of the building, is placed at their disposal ?

Sri A. G. RAMACHANDRA RAO.—We are not aware.

Sri V. MASIYAPPA.—Is it not a fact that the municipal council represented to the Hon'ble the Education Minister and other Ministers also time and again to give them permission to take up the work *amani* ?

Sri A. G. RAMACHANDRA RAO.—They have pressed for early completion. Even now they can do it.

Sri V. MASIYAPPA.—Have they not requested them to give an interview and pressed the matter before them ?

Sri A. G. RAMACHANDRA RAO.—We had granted them interview. They had come and represented to us.

Sri V. MASIYAPPA.—Will you give permission ?

Sri A. G. RAMACHANDRA RAO.—Certainly, as I said, permission will be immediately given.

ಶ್ರೀ ವಿ. ಮಸಿಯಪ್ಪ.—ಈಗಾಗಲೇ ಆ ಮುನಿಸಿ ಪಾಲಿಟಿಯವರು ಈ ಕಟ್ಟಡದ ಬಗ್ಗೆ ಡಿಪಾಜಿಟ್ ಮಾಡಿ ರತಕ್ಕ 30 ಸಾವಿರ ರೂಪಾಯಿಗಳನ್ನು ಉಸಯೋಗಿಸಿ ಕೊಂಡು ಕಟ್ಟಡಮಾಡಿದರೆ ಸರ್ಕಾರದವರು ಸಾಲ ಯಾನ ಆರು ಸಾವಿರ ರೂಪಾಯಿಗಳ ಗ್ರಾಂಟನ್ನು ಕೊಟ್ಟುಕೊಂಡು ಹೋಗುವುದಾಗಿ ಹೇಳಿರುವುದು ನಿಜವೇ ?

ಶ್ರೀ ಎ. ಜಿ. ರಾಮಚೆಂದ್ರರಾವ್.—ಸರ್ಕಾರ ದವರು ಮೊದಲು ಸಹಾಯಮಾಡುತ್ತೇವೆಂದು ಹೇಳಿ ದ್ದೆವು. ಆದರೆ ಮುನಿಸಿಪಾಲಿಟಿಯವರು ಆ ಜವಾ ಬ್ದಾರಿಯನ್ನು ತೆಗೆದುಕೊಂಡು ಕೆಲಸವನ್ನು ಪ್ರಾರಂಭಮಾಡಿದ್ದರೆ ನಾವೂ ಕೂಡ ಹಾಗೆ ಸಹಾಯ ಮಾಡಬಹುದಾಗಿತ್ತು.